
ಬೆಂಡೆಕಾಯಿ ಚಟ್ನಿಗೆ ಕುಣಿದಾಡುವ ಎನ್ನೆದೆಯ ಇಷ್ಟ ಗೊತ್ತಿದ್ದ ಚಿಕ್ಕಮ್ಮನ ಮಗಳು ಮನೆಗೆ ಬಂದಿದ್ದಾಗ, ಒಂದು ಮಧ್ಯಾಹ್ನದ ಊಟಕ್ಕೆ ರೊಟ್ಟಿ ಮಾಡುತ್ತೇನೆಂದು ಅಡುಗೆ ಮನೆ ಸೇರಿದ್ದಳು. ಸ್ವಲ್ಪ ಹೊತ್ತಿನಲ್ಲಿ ಬೆಂಡೆಕಾಯಿ ಚಟ್ನಿಯ ವಾಸನೆ ಬಂದು ಖುಷಿಯಾಗಿತ್ತು. ಆದರೆ ಎಷ್ಟೊತ್ತಾದರೂ ರೊಟ್ಟಿ ಬಡಿಯುವ ಸದ್ದೇ ಬರಲಿಲ್ಲ. ಏನು ಮಾಡುತ್ತಿದ್ದಾಳೆಂದು ಹೋಗಿ ನೋಡಿದ ನನಗೆ ಅಚ್ಚರಿ ಕಾದಿತ್ತು. ಗ್ಯಾಸ್ ಸ್ಟೌವ್‌ನ ಮುಂದೆ ನಿಂತಿದ್ದ ತಂಗಿ, ಲಟ್ಟಣಿಗೆಯಲ್ಲಿ ಜೋಳದ ಹಿಟ್ಟನ್ನು ಚಪಾತಿಯಂತೆ ಉದ್ದುತ್ತಿದ್ದಳು! ರೊಟ್ಟಿ ಎಂದರೆ ಕುಳಿತುಕೊಂಡು ಬಡಿಯಬೇಕು, ಥಡ್–ಥಡ್–ಥಡ್ ಎಂದು ಬಡಿಯುವ ಸದ್ದಾಗಬೇಕು, ಅಗಲವಾಗಿರಬೇಕು, ಮೀಡಿಯಂ ದಪ್ಪ ಇರಬೇಕು. ಚಪಾತಿಯಂತೆ ಮಾಡುವುದು ರೊಟ್ಟಿ ಹೇಗಾದೀತು? ಎಂಬ ಪ್ರಶ್ನೆ ಕಾಡಲು ಹತ್ತಿತು. ಇವಳು ಮಾಡುತ್ತಿರುವುದು ಮಾಮೂಲಿ ರೊಟ್ಟಿಯಂತೆ ರುಚಿಯಾಗಿರುವುದಿಲ್ಲ, ಇವತ್ತೇ ಕೊನೆ ಇವಳ ಕೈಯ ರೊಟ್ಟಿಯ ರುಚಿ ನೋಡುವುದು ಎಂದು ದೃಢವಾಗಿ ನಿರ್ಧರಿಸಿದೆ. ಆದರೆ ತಂಗಿ ಬಿಸಿ ಬಿಸಿ ರೊಟ್ಟಿ ಮತ್ತು ಚಟ್ನಿಯನ್ನು ತಟ್ಟೆಯ ಸಮೇತ ನನ್ನ ಮುಂದೆ ಹಿಡಿದಾಗ ಅವಳ ಮುಖ ನೋಡುತ್ತಲೇ ನಾನು ರೊಟ್ಟಿ ಚಟ್ನಿಯನ್ನು ಬಾಯಿಗಿಟ್ಟೆ. ಅರೇ, ಥೇಟು ಮಾಮೂಲಿ ರೊಟ್ಟಿಯದ್ದೇ ರುಚಿ. ನನಗೆ ಅಚ್ಚರಿಯ ಮೇಲೆ ಅಚ್ಚರಿ. ಬಡಿದು ರೊಟ್ಟಿ ಮಾಡುವ ವಿಧಾನಕ್ಕೆ ಅಂಟಿಕೊಂಡಿದ್ದ ನಾನು, ಈ ಹೊಸ ವಿಧಾನಕ್ಕೆ ತಲೆ ಬಾಗಿ ನನ್ನ ನಿರ್ಧಾರವನ್ನು ಬದಲಾಯಿಸಿಕೊಂಡೆ. ಬದಲಾವಣೆ ಜಗದ ನಿಯಮ.

ಅಮ್ಮ ಅಥವಾ ಹಿಂದಿನ ಕಾಲದ ಹಿರಿಯ ಹೆಂಗಸರಂತೆ ನೆಲದ ಮೇಲೆ ಕೂತು, ರೊಟ್ಟಿ ಮಾಡುವಾಗ ಮೈ ಕೈಗಳನ್ನೆಲ್ಲಾ ಹಿಟ್ಟು ಮಾಡಿಕೊಂಡು, ಭರ್ಜರಿಯಾಗಿ ಬೆವರುವ ಕಷ್ಟ, ಕೂತು ಎದ್ದೇಳುವಾಗ ಪಡುತ್ತಿದ್ದ ಬೆನ್ನು ನೋವಿನ ಸಂಕಟ, ಇವುಗಳಿಂದ ಪಾರಾಗುವ ಕ್ರಾಂತಿಕಾರಿ ಮಾರ್ಗವನ್ನು ಈ ಕಾಲದ ಹುಡುಗಿಯರು ಕಂಡುಕೊಂಡು ಯಶಸ್ವಿಯಾಗಿರುವುದನ್ನು ಕಂಡು ನನಗೆ ಖುಷಿಯಾಯಿತು. ಆಗ ಬೆರಳೆಣಿಕೆಯಲ್ಲಿದ್ದ ರೊಟ್ಟಿ ಲಟ್ಟಿಸುವ ಜನಸಂಖ್ಯೆ ಈಗ ಎಷ್ಟಾಗಿದೆಯೆಂದರೆ, ಈಗ ಎಲ್ಲರೂ ರೊಟ್ಟಿಯನ್ನು ಲಟ್ಟಿಸುವವರೇ ಎನ್ನುವಷ್ಟು. ಅಡುಗೆ ಮನೆಯ ಈ ಕ್ರಾಂತಿಯಂತೆ ವಿಜ್ಞಾನ–ತಂತ್ರಜ್ಞಾನದ ಯಾವ ವಿಷಯವೂ, ವಸ್ತುವೂ ಇಷ್ಟೊಂದು ವೇಗವಾಗಿ ನಮ್ಮ ಕಡೆಯ ಜನ ಮಾನಸದಲ್ಲಿ ಹರಡಿಕೊಂಡ ಉದಾಹರಣೆ ನನಗೆ ಗೊತ್ತಿಲ್ಲ.

ನಾನೀಗ ವಾಸವಾಗಿರುವ ಬೆಂಗಳೂರಿನ ವಿಜಯನಗರವು ರೊಟ್ಟಿ ಊಟಕ್ಕೆ ತುಂಬಾ ಪ್ರಸಿದ್ಧಿ. ಬಾಲ್ಯದ ರುಚಿಗೆ ಯಾರ ಕೈ ಅಡುಗೆಯೂ ರುಚಿಸುವುದಿಲ್ಲ ನಿಜ. ಇಲ್ಲಿನ ರೊಟ್ಟಿಗಳು ರೊಟ್ಟಿಗಳಾಗಿರಬೇಡವೇ? ತಿನ್ನುವವರು ಸಾಕಷ್ಟು ಜನರಿರುವುದರಿಂದ ಮುಖ್ಯವಾಗಿ



ಊರುಗಳನ್ನು ಬಿಟ್ಟು ಏನೇನೋ ಕೆಲಸಗಳಿಗೆ ಬಂದಿರುವ ನಮ್ಮ ಕಡೆಯ ಬ್ಯಾಚುಲರ್ರುಗಳೇ ಹೆಚ್ಚು ಇರುವುದರಿಂದ ಅವರಿಗೆ ರೊಟ್ಟಿಗಳನ್ನು ಬೇಕಾಬಿಟ್ಟಿಯಾಗಿ ಮಾಡಿಕೊಟ್ಟು ದುಡ್ಡು ದೋಚುವ ದಂಧೆ ಇಲ್ಲಿ ಶುರುವಾಗಿದೆ. ಕರಿಯುವ ಮೊದಲಿನ ಪೂರಿಯ ಹಿಟ್ಟಿನಷ್ಟೇ ತೆಳ್ಳಗಿರುತ್ತವೆ ರೊಟ್ಟಿಗಳೂ. ಪಲ್ಯ ಚಟ್ನಿಗಳು ನೀರು ನೀರಾಗಿವೆ. ಸಾರು ಅನ್ನಕ್ಕೆ ಅಂಟುತ್ತಲೇ ಇಲ್ಲ. ಸದ್ಯಕ್ಕೆ ಎರಡು ಜೋಳದ ರೊಟ್ಟಿಗಳು ಮತ್ತು ಒಂದಷ್ಟು ಪಲ್ಯಕ್ಕೆ ಏನಿಲ್ಲವೆಂದರೂ ನಲವತ್ತು ರೂಪಾಯಿಗಳು. ಹತ್ತು ಖಡಕ್ ರೊಟ್ಟಿಗಳ ಸದ್ಯದ ಬೆಲೆ ಎಪ್ಪತ್ತು ರೂಪಾಯಿಗಳು. ಅವುಗಳೋ ಹಪ್ಪಳಗಳಷ್ಟೇ ತೆಳ್ಳಗೆ. ನಾನಂತೂ ಕೆಲವು ಗುಲ್ಬರ್ಗಾ, ಗದಗ, ಬೀದರ್, ಬಿಜಾಪುರ, ಬಾಗಲಕೋಟೆ ರೊಟ್ಟಿ ಖಾನಾವಳಿಗಳಿಗೆ–ಊಟದ ಮನೆಗಳಿಗೆ ಹೋಗುವುದನ್ನೇ ಬಿಟ್ಟಿದ್ದೇನೆ. ದುಡ್ಡು ಕೊಟ್ಟು ಮೋಸ ಹೋದೆನೆಂಬ ಚಿಂತೆಗಿಂತಲೂ ನಾವು ತಿನ್ನುವ ಊಟಕ್ಕೆ, ಊಟಕ್ಕೆ ಅಂಟಿಕೊಂಡಿರುವ ನೆನಪುಗಳಿಗೆ ಒಂದು ಮರ್ಯಾದೆ ಕೊಡಲೇಬೇಕಲ್ಲವೇ? ತಿನ್ನುವುದನ್ನು ಅನುಭವಿಸದೇ ಬೈಯುತ್ತಾ ಕುಳಿತರೆ ತಿನ್ನುವುದು ಅರಗುವುದೇ? ಕೊರಗು ಎಂಬ ರಾಡಿಯಲ್ಲಿ ಊಟ ಮೈ–ಮನಸ್ಸಿಗೆ ಹತ್ತುವುದೇ? ಊಟದ ರಾಡಿಗಳಿಂದ ದೂರವಿರುವುದೇ ನಗರದ ಬದುಕಿನ ದೊಡ್ಡ ಕೆಲಸ ಮತ್ತು ಕಷ್ಟದ ಕೆಲಸ.

ಈ ಸಲದ ಸಂಕ್ರಾಂತಿಗೆಂದು ಊರಿಗೆ ಹೋಗಿದ್ದ ತಮ್ಮನ ಕೈಯಲ್ಲಿ ಅಮ್ಮ ಊರಿನಿಂದ ಕಳುಹಿಸಿದ್ದ ಸಜ್ಜೆ ರೊಟ್ಟಿಗಳನ್ನು ಕಂಡು ಖುಷಿಯಾಗಿತ್ತು. ಕೆಲಸಗಳ ಒತ್ತಡದಲ್ಲಿ ಒಂದೆರಡು ದಿನ ಮನೆಯಲ್ಲಿ ಊಟ ಮಾಡಲಾಗಿರಲಿಲ್ಲ. ಮೂರು ದಿನಗಳು ಕಳೆದು ಒಂದು ರಾತ್ರಿಯ ಊಟಕ್ಕೆ ರೊಟ್ಟಿಯ ಚೀಲಕ್ಕೆ ಹಾಕಿದಾಗ ಚೀಲ ಭಾರವಾಗಿತ್ತು. ಕೂಲಂಕಷವಾಗಿ ನೋಡಿದರೆ ಒಣಗಿರುವ ಸಜ್ಜೆಯ ರೊಟ್ಟಿಗಳ ತಳದಲ್ಲಿ ಅಮ್ಮ ಕಟ್ಟಿದ್ದ ಬುತ್ತಿ, ಮೆತ್ತನೆ ರೊಟ್ಟಿಗಳೂ ಇದ್ದವು. ನನಗೆ ಭರ್ಜರಿ ಖುಷಿಯಾಯಿತು, ಆದರೆ ಅದು ಬಹಳ ಹೊತ್ತು ಉಳಿಯಲಿಲ್ಲ. ಗಾಳಿಯಾಡದ ರೊಟ್ಟಿಗಳು ಬೂಜು ಹಿಡಿದು, ವಾಸನೆ ಬರುತ್ತಿದ್ದವು. ಫೋನು ಮಾಡಿ ಅಮ್ಮ ಮತ್ತು ತಮ್ಮರನ್ನು ಸರಿಯಾಗಿ ವಿಚಾರಿಸಿಕೊಂಡೆ. ಒಂದು ಸಣ್ಣ ಕಮ್ಯೂನಿಕೇಷನ್ ಗ್ಯಾಪಿನಿಂದ ಇದು ನಡೆದುಹೋಗಿತ್ತು. ಆದರೆ ಆದ ಬೇಜಾರು ಮಾತ್ರ ಬೇಗ ಹೋಗಲಿಲ್ಲ. ಜೋಳದ ರೊಟ್ಟಿಯ ಬಗ್ಗೆ ಈ ಪ್ರಬಂಧ ಬರೆಯುತ್ತಿದ್ದ ದಿನಗಳಲ್ಲೇ ಇದು ಆದದ್ದು ದೊಡ್ಡ ಕಾಕತಾಳೀಯ ಮತ್ತು ದುರಂತ. ನನಗೂ ಮತ್ತು ಜೋಳದ ರೊಟ್ಟಿಗೂ ಜನ್ಮಜನ್ಮಾಂತರದ ನಂಟಿರಬೇಕು. ನಾನೂ ಈಗ ರೊಟ್ಟಿ ಮಾಡುವುದನ್ನು ಕಲಿತುಕೊಂಡಿದ್ದೇನೆ. ಅದಕ್ಕೇ ಇಷ್ಟೆಲ್ಲಾ ಮಾತಾಡುತ್ತಿರುವುದು.

ರೊಟ್ಟಿಯ ಮಾಡುವುದರಲ್ಲಿ ನಿಪುಣರೆನಿಸಿಕೊಳ್ಳುವುದು ರೊಟ್ಟಿ ಅಗಲವಾಗಿ, ಮಧ್ಯಮ ದಪ್ಪದ್ದಾಗಿ, ಅದರ ಅಂಚು/ದಿಂಡು/ಸುತ್ತ ಬಿರುಕು ಬಿಡದಂತೆ ಆದಾಗ, ತುಂಬು ಚಂದಿರನಂತೆ ಆಕಾರ ಪಡೆದಾಗ. ಇದು ದೊಡ್ಡ ತಪಸ್ಸಿನ ಕೆಲಸ. ತಾಳ್ಮೆ ಇದ್ದವರಿಗೆ ಮಾತ್ರ ಇದು ಒಲಿಯುವುದು. ಅದಕ್ಕಾಗೇ ಇರಬೇಕು, ನಮ್ಮ ಕಡೆ ಹೆಣ್ಣು ನೋಡುವ ಸಂದರ್ಭಗಳಲ್ಲಿ ಗಂಡಿನ ಹಿರಿಯರು, 'ಹುಡ್ಗಿಗೆ ರೊಟ್ಟಿ ಮಾಡಾಕ ಬರ್ತಾತಾ?' ಎಂಬ ಪ್ರಶ್ನೆಯನ್ನು ಕೇಳಿಯೇ ತೀರುತ್ತಾರೆ.

ಒಮ್ಮೆ ಅಜ್ಜ ನನಗೆ, 'ನೀನ್ ಮದ್ವೀ ಆಗೋ ಹುಡ್ಗೀ ಹೆಂಗಿರ್ಬೇಕು ಅಂತ ಹೇಳಪ್ಪಾ ಸಾವ್ಕಾರಾ? ಹುಡುಕ್ತೀನಿ' ಎಂದು ಕೇಳಿದಾಗ ನಾನು ತಮಾಷೆಗೆ, 'ಹುಡ್ಗಿ ಹೆಂಗಾನ ಇರ್ಲಿ ಜಾ. ರೊಟ್ಟೀನ ರೌಂಡುಗ ಮಾಡಾಕ ಬರ್ಬೇಕು' ಎಂದು ಹೇಳಿದ್ದೆ. ಅದಕ್ಕೆ ಅಜ್ಜ, 'ಆಯ್ತು ಬುಡಪೋ, ನಿನ್ ಮದ್ವಿ ಆದಂಗೇ' ಎಂದು ನಕ್ಕಿದ್ದ.

ಮನೆಯವರೆಲ್ಲರೊಂದಿಗೆ ನಾನು ಮುಂದೆ ಹುಡುಗಿ ನೋಡಲು ಹೋದಾಗ ಆಗಬಹುದಾದ ಸಂದರ್ಭವನ್ನು ಆಗಾಗ ಕಲ್ಪಿಸಿಕೊಳ್ಳುತ್ತೇನೆ. ಅಜ್ಜ, 'ಜೋಳದ ರೊಟ್ಟಿನ ಗುಂಡುಕ ಮಾಡಾಕ ಬರ್ತೈತೇನವಾ?' ಎನ್ನುತ್ತಾನೆ. ಹುಡುಗಿ, 'ಬರತ್ತೆ' ಎನ್ನುತ್ತಾಳೆ. ಕೇಳಿಸಿಕೊಂಡ ನಮ್ಮವರಲ್ಲಿ ಮುಖ್ಯವಾಗಿ ಅಮ್ಮ ಭರ್ಜರಿ ಖುಷಿಯಾಗುತ್ತಾಳೆ. ಹುಡುಗಿ ಮಾತು ಮುಂದುವರೆಸಿ, 'ಆನ್‌ಲೈನ್‌ನಲ್ಲಿ ಆರ್ಡರ್ ಮಾಡೋಕ್ ಬರತ್ತೆ ಆಂಟಿ' ಎನ್ನುತ್ತಾಳೆ. ಅಮ್ಮ ನನ್ನ ಮುಖ ನೋಡುತ್ತಾಳೆ. ನಾನು ಅಮ್ಮನ ಮುಖ ನೋಡುತ್ತೇನೆ. ಅಮ್ಮ, 'ಮಾಡ್ಕೆಳಪಾ' ಎನ್ನುತ್ತಾಳೆ, ನಾನು ಮದುವೆಯಾಗುತ್ತೇನೆ. ರೊಟ್ಟಿಗಾಗಿ ಮದುವೆಯಾಗದೇ ಉಳಿಯಲಾಗುವುದಿಲ್ಲವಲ್ಲ. ಮುಂದೆ ಜೋಳದ ರೊಟ್ಟಿ ಮಾಡುವುದನ್ನು ಕಲಿಸಿಕೊಡುವೆ. ಬಿಡುವಿದ್ದವರು ಮಾಡುವ ರೊಟ್ಟಿಯಿಂದಾಗಿ ನಮ್ಮ ಅಡುಗೆ ಮನೆಯಲ್ಲೂ ಚಂದಿರ ಬೆಳಗುವನು.

ಪ್ರತಿಕ್ರಿಯಿಸಿ: **feedback@sudha.co.in**